# ನೇಮಕಾತಿ ಸಮಿತಿ

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.,
"ಉತ್ಕೃಷ್ಟ ಸಹಕಾರಿ ಸೌಧ", ಕೊಡಿಯಾಲ್‌ಬೈಲ್, ಮಂಗಳೂರು – 575 003.
***Website: www.scdccbank.com***

***

ದಿನಾಂಕ:01-07-2024

## ನೇಮಕಾತಿ ಪ್ರಕಟಣೆ

ಈ ಬ್ಯಾಂಕಿನಲ್ಲಿ ಪ್ರಸ್ತುತ ಖಾಲಿ ಇರುವ ಈ ಕೆಳಗಿನ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

ಹೊಸದಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವವರು ಈ ಕೆಳಗಿನಂತೆ ಆನ್‌ಲೈನ್ ಮುಖಾಂತರ ಬ್ಯಾಂಕಿನ ವೆಬ್‌ಸೈಟ್: ***www.scdccbank.com*** ಗೆ ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.

| ಹುದ್ದೆಗಳ ವಿವರ | ಒಟ್ಟು ಹುದ್ದೆ | ಮೀಸಲಾತಿ | ವೇತನ ಶ್ರೇಣಿ |
|---|---|---|---|
| ದ್ವಿತೀಯ ದರ್ಜೆ ಗುಮಾಸ್ತರು | *123* | *ಕೆಳಗೆ ನಮೂದಿಸಲಾಗಿದೆ* | 24910-475-28235-685-35085-950-44585-1230-55655 + *ಇತರ ಭತ್ಯೆಗಳು* |

**ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಗೆ ನೀಡಲಾಗಿರುವ ಮೀಸಲಾತಿ ವಿವರ:**

| | ಒಟ್ಟು | ಮಹಿಳೆಯರು | ಮಾಜಿ ಸೈನಿಕರು | ಅಂಗವಿಕಲರು |
|---|---|---|---|---|
| ಪರಿಶಿಷ್ಟ ಜಾತಿ | *18* | *6* | *1* | - |
| ಪರಿಶಿಷ್ಟ ಪಂಗಡ | *4* | *1* | - | - |
| ಪ್ರವರ್ಗ - I | *5* | *2* | - | - |
| ಪ್ರವರ್ಗ - II ಎ | *18* | *6* | *1* | - |
| ಪ್ರವರ್ಗ - II ಬಿ | *5* | *2* | - | - |
| ಪ್ರವರ್ಗ III ಎ | *5* | *2* | - | - |
| ಪ್ರವರ್ಗ -III ಬಿ | *6* | *2* | - | - |
| ಸಾಮಾನ್ಯ ಅರ್ಹತೆ | *62* | *19* | *6* | *3* |
| **ಒಟ್ಟು** | ***123*** | ***40*** | ***8*** | ***3*** |

**ಈಗಾಗಲೇ ದಿನಾಂಕ 07-08-2023ರ ಪ್ರಕಟಣೆಯ ಮೂಲಕ ಆಹ್ವಾನಿಸಲಾಗಿರುವ ಅರ್ಜಿಗಳಲ್ಲಿ ಲಿಖಿತ ಪರೀಕ್ಷೆಗೆ ಅರ್ಹವಾಗಿರುವ ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಅರ್ಹ/ ಅನರ್ಹರೇ ಹಾಗೂ ಯಾವ ಕಾರಣದಿಂದ ಅನರ್ಹರೆಂದು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ತಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿ ಪರಿಶೀಲಿಸಬಹುದು.**

ಕೆಲವೊಂದು ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿದ ಪೂರಕ ಮಾಹಿತಿ ಒದಗಿಸದಿರುವುದರಿಂದ ಲಿಖಿತ ಪರೀಕ್ಷೆಗೆ ಅನರ್ಹಗೊಂಡಿರುತ್ತಾರೆ.

1. ಪದವಿಯ ಅಂತಿಮ ಅಂಕಪಟ್ಟಿ ಲಭ್ಯವಿಲ್ಲದಿರುವುದು/ ಪದವಿ ಪರೀಕ್ಷೆಯ ಎಲ್ಲಾ ಸೆಮಿಸ್ಟರ್ ಅಂಕಪಟ್ಟಿ ಒದಗಿಸದಿರುವುದು
2. 6 ತಿಂಗಳ ಕಂಪ್ಯೂಟರ್ ಡಿಪ್ಲೊಮಾ ಕೋರ್ಸ್ ಸರ್ಟಿಫಿಕೇಟ್ ಒದಗಿಸದಿರುವುದು
3. ಊರ್ಜಿತದಲ್ಲಿರುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸದೆ ಇರುವುದು.
4. ಅರ್ಜಿ ಶುಲ್ಕ ಪಾವತಿ ರಶೀದಿ ಒದಗಿಸದಿರುವುದು
5. ಮೀಸಲಾತಿ ಅಭ್ಯರ್ಥಿಗಳು ವಯೋಮಿತಿ ಸಡಿಲಿಕೆಗೆ ಪೂರಕ ದಾಖಲಾತಿ ಒದಗಿಸದಿರುವುದು.

ಈ ಮೇಲಿನ ದಾಖಲಾತಿಗಳನ್ನು ಒದಗಿಸದೇ ಲಿಖಿತ ಪರೀಕ್ಷೆಗೆ ಅನರ್ಹಗೊಂಡಿರುವ ಅಭ್ಯರ್ಥಿಗಳು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸಲ್ಲಿಸಲು ಪುನಃ ಅವಕಾಶ ನೀಡಲಾಗಿದೆ. ಹಿಂದೆ ಸಲ್ಲಿಸಿರುವ ಅರ್ಜಿಗೆ ಪೂರಕವಾಗಿ ಹೆಚ್ಚುವರಿ ಮಾಹಿತಿ ಸಲ್ಲಿಸಲು ಇಚ್ಛಿಸುವವರು ನೋಂದಣಿ ಸಂಖ್ಯೆಯನ್ನು ನಮೂದಿಸಿ ದಾಖಲೆಗಳನ್ನು ಪ್ರತ್ಯೇಕವಾಗಿ ಕೇಂದ್ರ ಕಛೇರಿಗೆ **ದಿನಾಂಕ 18-07-2024ರ ಅಪರಾಹ್ನ 4.30ರ ಒಳಗೆ** ಸಲ್ಲಿಸಲು ಅವಕಾಶ ನೀಡಲಾಗಿದೆ. ಈಗಾಗಲೇ ಶುಲ್ಕ ಪಾವತಿಸಿದವರು ಪುನಃ ಶುಲ್ಕ ಪಾವತಿಸುವ ಅಗತ್ಯವಿಲ್ಲ ಹಾಗೂ ಅರ್ಹಗೊಂಡಿರುವ ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ.

**ವಿದ್ಯಾರ್ಹತೆ:**

1. ಮಾನ್ಯತೆ ಪಡೆದ ಕರ್ನಾಟಕ ರಾಜ್ಯದ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ (ಎಲ್ಲಾ ಮೂರು ವರ್ಷಗಳು ಸೇರಿ) ಕನಿಷ್ಠ 50% ಹಾಗೂ ಮೇಲ್ಪಟ್ಟು ಅಂಕ ಗಳಿಸಿರಬೇಕು.

   ಅಥವಾ

   ಮಾನ್ಯತೆ ಪಡೆದ ಕರ್ನಾಟಕ ರಾಜ್ಯದ ಅಂಗೀಕೃತ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ (ಎಲ್ಲಾ ಮೂರು ವರ್ಷಗಳು ಸೇರಿ) ಕನಿಷ್ಠ 45% ಹಾಗೂ ಮೇಲ್ಪಟ್ಟು ಅಂಕ ಗಳಿಸಿರಬೇಕು.

   ಮತ್ತು

2. ಕಂಪ್ಯೂಟರ್ ಅಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನದೊಂದಿಗೆ ಕನಿಷ್ಠ 6 ತಿಂಗಳ ಅವಧಿಯ ಕಂಪ್ಯೂಟರ್ ಡಿಪ್ಲೋಮಾ ಅಥವಾ 6 ತಿಂಗಳ ಅವಧಿಯ ಯಾವುದೇ ಕಂಪ್ಯೂಟರ್ ತರಬೇತಿ ಪಡೆದ ಸರ್ಟಿಫಿಕೇಟ್ ಹೊಂದಿರಬೇಕು. ಆದರೆ ಪದವಿ ತರಗತಿಯಲ್ಲಿ ಕಂಪ್ಯೂಟರ್ ಸೈನ್ಸ್ ಪತ್ಯ ಹೊಂದಿದವರಿಗೆ ಈ ಷರತ್ತಿನಿಂದ ವಿನಾಯಿತಿ ಇರುವುದು.

ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 200 ಅಂಕಗಳ ಪ್ರಶ್ನೆಗಳನ್ನು ಹೊಂದಿರುತ್ತದೆ.

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1. | ಕನ್ನಡ ಭಾಷೆ | 50 |
| 2. | ಸಾಮಾನ್ಯ ಇಂಗ್ಲೀಷ್ | 25 |
| 3. | ಸಾಮಾನ್ಯ ಜ್ಞಾನ | 25 |
| 4. | ಸಹಕಾರಿ ವಿಷಯ/ ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ | 50 |
| 5. | ಭಾರತದ ಸಂವಿಧಾನ | 25 |
| 6. | ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯಗಳಿಗೆ | 25 |
| **ಒಟ್ಟು** | | **200** |

ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ 1:5 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

**ಆದ್ಯತೆ:**

ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಬಿ.ಕಾಂ., ಬಿ.ಬಿ.ಎಂ. ಬಿ.ಸಿ.ಎ. ಪದವಿಯಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಹಾಗೂ ಡಿ.ಸಿ.ಸಿ ಬ್ಯಾಂಕ್, ಪಟ್ಟಣ ಸಹಕಾರಿ ಬ್ಯಾಂಕ್ ಹಾಗೂ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘ ಇವುಗಳಲ್ಲಿ ಕೆಲಸದ ಅನುಭವ, ಕಂಪ್ಯೂಟರ್ ಪರಿಣಿತಿ ಹೊಂದಿದವರಿಗೆ ಆದ್ಯತೆ, ಅಭ್ಯರ್ಥಿಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಿರರ್ಗಳವಾಗಿ ಓದುವ, ಬರೆಯುವ ಹಾಗೂ ಮಾತನಾಡುವ ಜ್ಞಾನ ಹೊಂದಿರತಕ್ಕದ್ದು.

**ವಯೋಮಿತಿ:**

ನೇಮಕಾತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ದಿನಾಂಕ **18-07-2024**ಕ್ಕೆ ಸರಿಯಾಗಿ ಅಭ್ಯರ್ಥಿಯ ಗರಿಷ್ಠ ವಯೋಮಿತಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರೆ **40** ವರ್ಷ, ಇತರೆ ಹಿಂದುಳಿದ ಜಾತಿ ಮತ್ತು ವರ್ಗಗಳಿಗೆ **38** ವರ್ಷ ಹಾಗೂ ಇತರರು **35** ವರ್ಷ ಮೀರಿರಬಾರದು. ಮಾಜಿ ಸೈನಿಕರು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಯೋಮಿತಿಗಿಂತ ಅವರು ಸೇವೆ ಸಲ್ಲಿಸಿದ ಅವಧಿಯಷ್ಟು ಅಥವಾ ಗರಿಷ್ಠ 10 ವರ್ಷದ ಹೆಚ್ಚುವರಿ ರಿಯಾಯಿತಿ ನೀಡಲಾಗುವುದು.

ಲಿಖಿತ ಪರೀಕ್ಷೆ/ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಹಾಜರಾಗತಕ್ಕದ್ದು. ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಗಳ ದಿನಾಂಕ ಮತ್ತು ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್: ***www.scdccbank.com*** ನಲ್ಲಿ ಪ್ರಕಟಿಸಲಾಗುವುದು.

ಮೇಲೆ ತಿಳಿಸಿರುವ 123 ಹುದ್ದೆಗಳಲ್ಲದೇ, ಮುಂದಿನ ಆರು ತಿಂಗಳ ಅವಧಿಯಲ್ಲಿ ಎರಡನೇ ದರ್ಜೆ ಗುಮಾಸ್ತ ಹುದ್ದೆ ಖಾಲಿಯಾದಲ್ಲಿ ಭರ್ತಿಗೊಳಿಸುವರೇ ಹೆಚ್ಚುವರಿ ಪಟ್ಟಿಯೊಂದನ್ನು ಸಹ ತಯಾರಿಸಲಾಗುವುದು.

**ಅರ್ಜಿ ಶುಲ್ಕ:**

| | |
|---|---|
| ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ | – ರೂ.500/– +ಜಿಎಸ್‌ಟಿ ರೂ.90/– ಒಟ್ಟು ರೂ.590/– |
| ಇತರ ಅಭ್ಯರ್ಥಿಗಳಿಗೆ | – ರೂ.1000/– +ಜಿಎಸ್‌ಟಿ ರೂ.180/– ಒಟ್ಟು ರೂ.1180/– |

**ಸಹಿ/–**

**ಸದಸ್ಯ ಕಾರ್ಯದರ್ಶಿ/ ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ನೇಮಕಾತಿ ಸಮಿತಿ**

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.,

"ಉತ್ಕೃಷ್ಟ ಸಹಕಾರಿ ಸೌಧ", ಕೊಡಿಯಾಲ್‌ಬೈಲ್, ಮಂಗಳೂರು – 575 003.

***Website: www.scdccbank.com***

***

ದಿನಾಂಕ:01–07–2024

## ಅರ್ಜಿ ನೋಂದಾಯಿಸುವ ಕ್ರಮ: ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡುವ ಬಗ್ಗೆ ಮಾರ್ಗಸೂಚಿ:

**ಅಭ್ಯರ್ಥಿಗಳು Google Chrome ಅಥವಾ Mozilla Firefox ಬ್ರೌಸರನ್ನು ಉಪಯೋಗಿಸುವಂತೆ ಸೂಚಿಸಲಾಗಿದೆ.**

1. ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ (***www.scdccbank.com***) ಮೂಲಕ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ನೇಮಕಾತಿ ಪ್ರಕಟಣೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದಿ ಮುಂದುವರಿಯುವುದು ಹಾಗೂ ಅಗತ್ಯದ ಮಾಹಿತಿಗಳೊಂದಿಗೆ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಭರ್ತಿಗೊಳಿಸಿ ಸಲ್ಲಿಸತಕ್ಕದ್ದು.
2. ಓರ್ವ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದ್ದು.
3. ಅಭ್ಯರ್ಥಿಗಳು ಅರ್ಜಿಯನ್ನು ಬಹಳ ಜಾಗರೂಕತೆಯಿಂದ ಭರ್ತಿಮಾಡತಕ್ಕದ್ದು. ಒಂದು ಸಲ ಭರ್ತಿ ಮಾಡಿ ಕಳುಹಿಸಿದ ಅರ್ಜಿಯನ್ನು ತಿದ್ದುಪಡಿ ಮಾಡುವ ಅವಕಾಶ ಇರುವುದಿಲ್ಲ.
4. ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಪದವಿಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಸ್ವಯಂ ದೃಢೀಕೃತ ಅಂಕಪಟ್ಟಿಗಳು.
5. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿಗೆ ಸೇರಿದ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಬಂಧನೆಗಳಿಗೊಳಪಟ್ಟು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಲಗ್ತೀಕರಿಸತಕ್ಕದ್ದು.
6. ದೈಹಿಕ ಅಂಗವಿಕಲರು ಪ್ರಸ್ತುತ ಚಾಲ್ತಿಯಲ್ಲಿರುವ ನಿಬಂಧನೆಗಳಿಗೊಳಪಟ್ಟು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಲಗ್ತೀಕರಿಸತಕ್ಕದ್ದು.
7. ಮಾಜಿ ಸೈನಿಕರು ಸೇವೆಯಿಂದ ಬಿಡುಗಡೆಗೊಂಡ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡುವ ಬಿಡುಗಡೆ ಪತ್ರ.
8. ಲಿಖಿತ ಪರೀಕ್ಷೆ/ ಸಂದರ್ಶನಕ್ಕೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಬ್ಯಾಂಕಿನಿಂದ ಯಾವುದೇ ಪ್ರಯಾಣ ಭತ್ಯೆ/ ದಿನ ಭತ್ಯೆಗಳನ್ನು ನೀಡಲಾಗುವುದಿಲ್ಲ.
9. ಅಭ್ಯರ್ಥಿಗಳು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ (20KBs to 50KBs)ಕಲರ್ ಭಾವಚಿತ್ರವನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
10. ನಿಗದಿ ಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೇ ಯಾವುದೇ ಸಮನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.
11. ಅರ್ಜಿಯಲ್ಲಿ ನಮೂದಿಸಿರುವ ಅಂಕಗಳು ಹಾಗೂ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
12. ಆಯ್ಕೆಯಾದ ನಂತರ ಅಭ್ಯರ್ಥಿಗಳ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ ಪ್ರಾಧಿಕಾರ/ ವಿಶ್ವವಿದ್ಯಾನಿಲಯಗಳಿಂದ ದೃಢೀಕರಿಸಿಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
13. ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ಸರಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳು ಹಾಗೂ ಆದೇಶಕ್ಕೆ ಒಳಪಟ್ಟಿರುತ್ತದೆ.
14. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ ಮತ್ತು ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
15. ಯಾವುದೇ ಅಭ್ಯರ್ಥಿಗೆ ಲಿಖಿತ ಪರೀಕ್ಷೆಗೆ ಕರೆ ಬಂದಿಲ್ಲವಾದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯತಕ್ಕದ್ದು. ಮತ್ತು ಈ ಕುರಿತು ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ಇರುವುದಿಲ್ಲ.
16. ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket)ನ್ನು ಸಂಬಂಧಿತ ಅಭ್ಯರ್ಥಿಯ ಇಮೇಲ್ ಐಡಿಗೆ ಕಳುಹಿಸಿಕೊಡಲಾಗುವುದು. ಸದ್ರಿ ಪ್ರವೇಶ ಪತ್ರವನ್ನು ಇಮೇಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.
17. ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಯ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯನ್ನು ಸ್ಪಷ್ಟವಾಗಿ ಹಾಗೂ ಕಡ್ಡಾಯವಾಗಿ ನಮೂದಿಸತಕ್ಕದ್ದು. ಮುಂದಿನ ಪತ್ರ ವ್ಯವಹಾರವು ಇದನ್ನೇ ಅವಲಂಬಿಸಿರುತ್ತದೆ.
18. ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Helpline)0824–2440381, 2440882ನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ಪಡೆಯಬಹುದು.
19. ಅರ್ಜಿಯನ್ನು ಭರ್ತಿಗೊಳಿಸಿದ ಬಳಿಕ ದಯವಿಟ್ಟು ***"Preview Application"*** ಒತ್ತುಗುಂಡಿಯನ್ನು ಒತ್ತಿ ಭರ್ತಿಗೊಳಿಸಿದ ಅರ್ಜಿಯನ್ನು ಪರಿಶೀಲಿಸುವುದು.
20. ಭರ್ತಿ ಮಾಡಿದ ಅರ್ಜಿಯಲ್ಲಿನ ವಿವರಗಳು ಸರಿಯಾಗಿದ್ದಲ್ಲಿ, ದಯವಿಟ್ಟು ***"Submit Application"*** ಒತ್ತುಗುಂಡಿಯನ್ನು ಒತ್ತಿ ಅರ್ಜಿಯನ್ನು ಒಪ್ಪಿಸುವುದು.
21. ಅರ್ಜಿಯನ್ನು ಒಪ್ಪಿಸಿದ ಬಳಿಕ ***"Application Submitted Successfully"*** ಎಂಬ ಸಂದೇಶ ಬರುವುದು. ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆಯುವರೇ ದಯವಿಟ್ಟು ***"download"*** ಎಂಬ ಸಂಪರ್ಕದ ಮೇಲೆ ಒತ್ತಿದಾಗ

ಭರ್ತಿಯಾದ ಅರ್ಜಿಯು *PDF* ನಮೂನೆಯಲ್ಲಿ ತೆರೆದುಕೊಳ್ಳುವುದು. ಇದನ್ನು ತಮ್ಮ ಗಣಕಯಂತ್ರದಲ್ಲಿ ದಾಖಲಿಸಿ ಉಳಿಸಿಕೊಳ್ಳಬಹುದು ಹಾಗೂ ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆಯಬಹುದು.

22. ಭರ್ತಿಗೊಳಿಸಿದ ಅರ್ಜಿಯನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಭರ್ತಿಗೊಳಿಸಿ ಸಲ್ಲಿಸಿದ ನಂತರ ಲಭ್ಯವಾಗುವ ಅರ್ಜಿಯ ಮುದ್ರಿತ ಪ್ರತಿಯನ್ನು (Printout) ಪಡೆದುಕೊಂಡು ಅದರಲ್ಲಿ ತಮ್ಮ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಿ, ಸಹಿ ಎಂದು ಇರುವಲ್ಲಿ ತಮ್ಮ ಸಹಿ ಹಾಕತಕ್ಕದ್ದು. ಅರ್ಜಿ ಶುಲ್ಕವನ್ನು ಈ ಬ್ಯಾಂಕಿನ ಯಾವುದೇ **ಶಾಖೆಯಲ್ಲಿ** ನಗದು ಪಾವತಿ ರಶೀದಿ ಮೂಲಕ ಅಥವಾ **"ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು"** ಹೆಸರಿಗೆ ಪಡೆದ ಡಿ.ಡಿ ಮೂಲಕ ಪಾವತಿಸಬಹುದು. ಮುದ್ರಿತ ಅರ್ಜಿ ನಮೂನೆಯನ್ನು ಶುಲ್ಕ ಪಾವತಿ ರಶೀದಿ ಅಥವಾ ಡಿ.ಡಿ ಹಾಗೂ ಅರ್ಜಿಯಲ್ಲಿ ಕೇಳಿರುವ ಅಂಕಪಟ್ಟಿ ಮತ್ತು ಎಲ್ಲಾ ದಾಖಲೆಗಳ ಪ್ರತಿಗಳಾದ ಮೀಸಲಾತಿ, ಅನುಭವ ಪ್ರಮಾಣ ಪತ್ರ ಇತ್ಯಾದಿಗಳನ್ನು ಸ್ವಯಂ ದೃಢೀಕರಿಸಿ **ದಿನಾಂಕ 18-07-2024ರ ಅಪರಾಹ್ನ 4.30ರ ಒಳಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಕೊಡಿಯಾಲ್‌ಬೈಲು, ಮಂಗಳೂರು – 575003** ಇವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಂಬಂಧಪಟ್ಟ ಸಂಸ್ಥೆಯ ಮೂಲಕ ಸಲ್ಲಿಸತಕ್ಕದ್ದು.

23. ಅಪೂರ್ಣ ಅರ್ಜಿಗಳನ್ನು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಶುಲ್ಕ ಹಿಂತಿರುಗಿಸಲಾಗುವುದಿಲ್ಲ. ಅಭ್ಯರ್ಥಿಗಳು ನಿಗದಿ ಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು. ಶುಲ್ಕ ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಹಾಗೂ ಶುಲ್ಕ ಪಾವತಿಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

24. ಅಭ್ಯರ್ಥಿಗಳು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.

**ಸದಸ್ಯ ಕಾರ್ಯದರ್ಶಿ/ ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**Recruitment Committee**
**The South Canara District Central Co-operative Bank Ltd.,**
**Uthkrushta Sahakari Soudha, Kodialbail, Mangalore – 575 003**
**Website: www.scdccbank.com**

*Date:01-07-2024*

## ***NOTIFICATION***

*Applications in the prescribed format are invited from the eligible candidates through the online portal for filling up of the following vacant post in the Bank through direct recruitment process. Application should be uploaded through the official website of the bank* ***www.scdccbank.com****.*

| ***Name of the Post*** | ***Vacancies*** | ***Reservation*** | ***Scale of Pay*** |
|---|---|---|---|
| ***Second Division Clerk*** | *123* | *As Mentioned below* | 24910-475-28235-685-35085-950-44585-1230-55655+ *other allowances* |

***Reservation for the post of Second Division Clerks are as under.***

| | *Total* | *Women* | *Ex- Servicemen* | *Handicapped* |
|---|---|---|---|---|
| *Scheduled Caste* | *18* | *6* | *1* | - |
| *Scheduled Tribe* | *4* | *1* | - | - |
| *Category I* | *5* | *2* | - | - |
| *Category II(a)* | *18* | *6* | *1* | - |
| *Category II (b)* | *5* | *2* | - | - |
| *Category III(a)* | *5* | *2* | - | - |
| *Category III(b)* | *6* | *2* | - | - |
| *General Merit* | *62* | *19* | *6* | *3* |
| ***Total*** | ***123*** | ***40*** | ***8*** | ***3*** |

***Candidates who have already submitted their applications vide notification dated 07-08-2023, need not apply again. Candidates can verify the status of their applications whether eligible or ineligible for the written test and reason for which they are ineligible by entering their Registration Number on the Bank's Website.***

Some of the candidates are ineligible for the written test due to non- submission of the following supporting documents.

- *Non availability of final year Degree Marks card/ Marks card of all semesters.*
- *Failure to provide 6 months Computer Diploma course certificate.*
- *Non submission of valid reservation certificate along with the application.*
- *Failure to provide receipt for the payment of application fee.*
- *Non submission of supporting documents for age relaxation by the candidates applying under reservation.*

Candidates who are ineligible for the written test for not submitting the above documents are once again given an opportunity to submit the same. Candidates, who are willing to submit the additional information in support of their earlier application, may submit the same to Head office separately by noting their Registration Number **on or before 18-07-2024 before 4.30 P.M**. Those who are eligible and have already remitted the application fee, need not remit the fees again and need not apply again.

***Qualification:***

1. *A Degree in any recognized University in Karnataka with minimum of 50% marks and above (aggregate of 3 years)*

   *Or*

   *A Post Graduation Degree in any recognized University in Karnataka with minimum of 45% marks and above in any Degree (aggregate of 3 years).*

   *And*

2. *Minimum 6 months Diploma in Computer with knowledge of computer operation and Application or any other Certificate course in Computer operation and Application with minimum of 6 months duration. The candidates having Degree with Computer subject are exempted from this condition.*

*The written test for qualified Second Division Clerk will consist of 200 marks questions consisting of the following subjects*

| Sl.No.. | Subject | Marks |
|---|---|---|
| 1. | *Kannada language* | 50 |
| 2. | *General Englilsh* | 25 |
| 3. | *General Knowledge* | 25 |
| 4. | *Co-operative matters/ Banking Sector* | 50 |
| 5. | *Constitution of India* | 25 |
| 6. | *Subject relevant to the objectives & activities of the society* | 25 |
| | *Total* | **200** |

*On the basis of the marks obtained in the written test, the merit list will be prepared and the candidates will be called for an interview in the ratio of 1:5 basis.*

***Preference:***

*Preference will be given to the candidates having B.Com, BBM, BCA degree for the post of Second Division Clerk. Preference will also be given to the candidates having additional qualifications, work experience in DCC Banks or Urban Coop. Banks, Primary Agricultural Credit Coop. Societies and Experts in computer application. Candidates must have fluency in Kannada and English to read, write and speak.*

***Age Limit:***

*As on **18-07-2024** the candidate should be within **40** years in case of SC & ST, **38** years in case of Backward community and class and **35** years in case of others. Age relaxation to Ex-servicemen upto the period of service rendered by them subject to maximum of 10 years.*

*Candidates must appear for written test and interview at their own cost when called for. Date and other details of the written test and Interview will be notified on the official website **www.scdccbank.com** to the eligible candidates.*

*In addition to the above 123 posts, an additional list will be prepared with reservation of posts for filling up the vacancies arising in Second Division Clerk posts in the next six months.*

***Application Fees:*** *SC & ST Candidates - Rs.500/- + GST of Rs.90/- Total Rs.590/-*
*For others - Rs.1000/- + GST of Rs.180/- Total Rs.1180/-*

***Sd/-***

***Member Secretary/Chief Executive Officer***

***Recruitment Committee***
***The South Canara District Central Co-operative Bank Ltd.,***
***Uthkrushta Sahakari Soudha, Kodialbail, Mangalore – 575 003***
***Website: www.scdccbank.com***

*Date:01-07-2024*

***<u>How to apply: Guidelines for filling up the Online Application:</u>***

***The Candidates are suggested to use Google Chrome or Mozilla Firefox Browser***

i. *Recruitment notification and instructions must be followed before filling the application through official website of the bank* **(www.scdccbank.com)** *and submit the application through online along with the required information.*

ii. *A candidate should submit only one application.*

iii. *Candidates should fill the application very carefully as the application once filled and sent is not allowed to be rectified.*

iv. *Self-attested marks card of all semesters of degree obtained from recognized University.*

v. *A certificate from the competent authority as per the provisions currently in force should be attached by the candidates who applied under Schedule caste/ schedule tribe/ Category-1, 2A, 2B, 3A & 3B.*

vi. *A certificate from the competent Authority as per the provisions currently in force should be attached by the physically handicapped candidates.*

vii. *Discharge letter issued by the concerned authority regarding discharge of Ex-servicemen from service.*

viii. Candidate must appear for the written test and interview at their own cost when called for *and No traveling allowance/ Dearness allowance will be provided by the bank.*

ix. *Candidates should scan and upload their latest passport size colour photo (20KBs to 50KBs) through online.*

x. *Any other qualification other than the prescribed qualification in the notification will not be considered.*

xi. *If any discrepancy is found in the marks and other documents mentioned in the application, such application will not be considered.*

xii. *The Bank reserves the right to verify the genuineness of the candidate's documents from the concerned Authority/ Department/ University after selection.*

xiii. *The recruitment process is as per the directions and orders issued by the Government of Karnataka from time to time.*

xiv. *The Bank reserves the right to postpone and cancel the recruitment / change the terms and conditions without assigning any reason.*

xv. *Any candidate who has not been called for the written test shall be deemed ineligible and no correspondence will be entertained in this regard.*

xvi. *Date, time and venue of the written test will be notified on the official website only for the candidates eligible for the written test. The Hall ticket for written test of the eligible candidates will be sent to the concerned Email ID's and same shall be downloaded and should be produced at the time of the written test.*

xvii. *While filling the application through online the* ***address, mobile number and email id*** *of the candidate should be mentioned clearly and compulsorily for further correspondence.*

xviii. *In case of any technical difficulty or problem while filling the application through online, contact the Helpline 0824-2440381, 2440882, for further clarification.*

xix. *After filling the application, please click on* ***"Preview Application"*** *button to view the filled application.*

xx. *If all details filled are found correct then click on* ***"Submit Application"*** *button to submit the application.*

xxi. *After submission, you will receive a message* ***"Application Submitted Successfully"****. To take the printout of the application, please click on* ***"download"*** *link. This will open the filled application in PDF format, save the application in the local system and take the printout.*

xxii. *After submission of the application through online, candidate should take a printout of the filled application. The Candidates should affix the latest passport size photo to the application and sign the application in the space provided. The Candidates should remit the application fees in any of our Branches by cash through Pay- in-slip or by a Bank draft in favour of* ***"The S.C.D.C.C Bank Ltd., Mangalore"****. The filled up application with signature, photo and counterfoil of the Pay- in-slip or D.D. and self-attested copies of all the Marks Card along with all the required certificates such as Reservation, Experience, etc. should be submitted to* ***The Chief Executive Officer, The South Canara District Central Cooperative Bank Ltd., Kodialbail, Mangalore – 575 003*** *on or before* ***18-07-2024*** *before 4.30 P.M. Those in employment should submit their applications through the Employer.*

xxiii. *Incomplete applications and applications received after the last date prescribed will not be considered and application fees will not be refunded. Candidates should pay the prescribed fees compulsorily. The application fees will not be refunded under any circumstances and Applications without prescribed fees will not be considered.*

xxiv. *Candidates should follow the instructions issued from time to time on the Bank's Website.*

***Member Secretary/Chief Executive Officer***